**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆಃ 228 /2023**

**ಸಾಕ್ಷಿಯನ್ನು ದಿಃ 03.10.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ. MRH ಪರ ಕು.IHS ವಕೀಲರಿಂದಃ**

ಹುಣಸೂರಿನ ಕರೀಗೌಡರ ಬೀದಿಯಲ್ಲಿರುವ ರಮೇಶ್ ಅಲಿಯಾಸ್ ಕುಟ್ಟಿ ರಮೇಶ್ ಮತ್ತು ನಾನು ಸ್ನೇಹಿತರು ಎಂದರೆ ಸರಿ. ಆರೋಪಿ ಮತ್ತು ಮೇಲೆ ಹೇಳಿದ ಕುಟ್ಟಿರಮೇಶ್ ಸ್ನೇಹಿ ತರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಕುಟ್ಟಿ ರಮೇಶ್ ರವರ ಮಧ್ಯೆ ಹಣಕಾಸಿನ ವ್ಯವಹಾರ ಇತ್ತು ಎಂದರೆ ಗೊತ್ತಿಲ್ಲ. ಆರೋಪಿ ಮತ್ತು ಕುಟ್ಟಿರಮೇಶ್ ರವರ ಮಧ್ಯೆ ಇದ್ದ ಹಣಕಾಸಿನ ಭದ್ರತೆಗಾಗಿ ಆರೋಪಿ ಕುಟ್ಟಿರಮೇಶ ರವರಿಗೆ ಭದ್ರತೆಗಾಗಿ ಚೆಕ್ಕನ್ನು ನೀಡಿದ್ದಾರೆ ಎಂದರೆ ಗೊತ್ತಿಲ್ಲ. ಆರೋಪಿ ಮತ್ತು ಕುಟ್ಟಿರಮೇಶ್ ರವರ ಹಣಕಾಸಿನ ವ್ಯವಹಾರ ಮುಗಿದ ನಂತರ ಕುಟ್ಟಿರಮೇಶ್ ರವರು ಆರೋಪಿ ನೀಡಿದ ಚೆಕ್ಕನ್ನು ನನಗೆ ನೀಡಿ ನನ್ನ ಮೂಲಕ ಆರೋಪಿಗೆ ಗೊತ್ತಿಲ್ಲದಂತೆ ಈ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಅಕ್ಟೋಬರ್ 2022ರ ಮೊದಲ ವಾರದಲ್ಲಿ ನಾನು ಆರೋಪಿಯ ವ್ಯವಹಾರ ಮತ್ತು ಗೃಹಕೃತ್ಯದ ಅಡಚಣೆಗಾಗಿ ರೂ. 4 ಲಕ್ಷ ಸಾಲ ನೀಡಿದ್ದೇನೆ ಎಂದು ನನ್ನ ದೂರಿನ 2ನೇ ಪ್ಯಾರಾದಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ದಿಃ 02.03.2023ರ ದಿನಾಂಕ ನಮೂದಿಸಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹುಣಸೂರು ಶಾಖೆಯ ಚೆಕ್ಕನ್ನು ರೂ.4 ಕ್ಕೆ ನೀಡಿದ್ದಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ದೂರಿನ 4ನೇ ಪ್ಯಾರಾದಲ್ಲಿ ಹೇಳಿರುವ ಚೆಕ್ಕನ್ನು ಆರೋಪಿ ನನಗೆ ಕೊಟ್ಟಿಲ್ಲ, ಕುಟ್ಟಿರಮೇಶ್ ರವರು ನೀಡಿದ ಆರೋಪಿಯ ಚೆಕ್ಕನ್ನು ನಾನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ದಿಃ 21.03.2023 ರಂದು ವಕೀಲರಿಂದ ಕಳುಹಿಸಿದ್ದೇನೆ ಎನ್ನುವ ನೋಟಿಸ್ ಗೆ ನಾನು ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕುಟ್ಟಿರಮೇಶ್ ರವರಿಗೆ ನೀಡಿದ ಚೆಕ್ಕನ್ನು ಕುಟ್ಟಿರಮೇಶ್ ರವರು ನನಗೆ ನೀಡಿ ಅದನ್ನು ದುರುಪಯೋಗಪಡಿಸಿಕೊಂಡು ನಾನು ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆರೋಪಿ ನನಗೆ ಯಾವುದೇ ಹಣ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.

ಕಾಲಾವಕಾಶ ಕೋರಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಕಾಲಾವಕಾಶ ಕೋರಿದ್ದು, ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೇಳಿದ್ದು, ಸಕಾರಣ ಇಲ್ಲದಿರುವುದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ

ಇಲ್ಲ ಎಂದಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

( )
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.